ರೋದನದಂತಿತ್ತು. ಅದನ್ನು ಕೇಳಿದ ಅವರ ಭಾವರಹಿತ ಹೆಂಡತಿಯ ಕಣ್ಣುಗಳಿಂದಲೂ ಎರಡು ಹನಿ ಕಣ್ಣೀರು ಹರಿದುದನ್ನು ನಾನು ನೋಡಿದೆ.

ಆ ದಿನ ತಡೆಯಲಾರದೆ ನಾನು ಎದುರಿನ ದೊಡ್ಡ ಗ್ರಾಸರಿ ಅಂಗಡಿಯತ್ತ ಹೆಜ್ಜೆ ಹಾಕಿದೆ. ಅಂಗಡಿಯಾತನಿಗೆ ನನ್ನ ಪರಿಚಯವಿತ್ತು, "ನಮಸ್ಕಾರ ಮಾಷ್ಟ್ರೇ" ಅಂದ.

ನಾನು ಹೆಚ್ಚು ಸುತ್ತಿ ಬಳಸದೆ ಅವನ ಬಳಿ, "ಎದುರಂಗಡಿಯ ನಣ್ಣರು ಯಾಕೆ ಹಾಗೆ ಹುಚ್ಚು ಹುಚ್ಚಾಗಿ ವರ್ತಿಸುವುದು? ಏನಾದರೂ ಸಮಸ್ಯೆ ಆಗಿತ್ತಾ ಅವರಿಗೆ?" ಎಂದು ಕೇಳಿದೆ.

"ನಿಮಗೆ ಗೊತ್ತಿಲ್ವಾ?"

"ಇಲ್ಲ."

"ನಣ್ಣರ ಮಗಳು ಮಂಗಳೂರಿನಲ್ಲಿ ಕಾಲೇಜಿಗೆ ಹೋಗುತ್ತಿದ್ದಳು. ತುಂಬಾ ಚೆಂದದ ಚುರುಕಿನ ಹುಡುಗಿ. ಒಬ್ಬ ಲಾರಿ ಡ್ರೈವರ್‌ನನ್ನು ಲವ್ ಮಾಡಿ ಅವನ ಜತೆಗೆ ಓಡಿಹೋದಳು. ಕಾಲೇಜು ಎಲ್ಲ ಬಿಟ್ಟು ಈಗ ಅವನ ಮನೆಯಲ್ಲಿ ಬೀಡಿಕಟ್ಟಿಕೊಂಡು ಇದ್ದಾಳೆ."

"ಛೇ! ಅಯ್ಯೋ ಪಾಪ!"

"ಆಗ ನಣ್ಣರು ವೆಂಕಟ್ರಾಯರ ಬಿಲ್ಡಿಂಗಿನಲ್ಲಿ ಹೋಟೆಲ್ ನಡೆಸುತ್ತಿದ್ದರು. ಗಂಡಹೆಂಡತಿ ದುಡಿಯುತ್ತಿದ್ದರು. ಒಳ್ಳೆಯ ವ್ಯಾಪಾರವೂ ಇತ್ತು. ಅಲ್ಲಿಗೆ ಚಾ ಕುಡಿಯಲು ಬರುತ್ತಿದ್ದ ಒಬ್ಬ ಡ್ರೈವರನೇ ಮಗಳನ್ನು ಹಾರಿಸಿಕೊಂಡು ಹೋದದ್ದು. ಅವಳು ಹೋದ ಮೇಲೆ ಅವರು, ಯಾಕಂತ ಗೊತ್ತಿಲ್ಲ, ಹೋಟೆಲ್ ಬಿಟ್ಟು ಈ ರೀತಿ ಇದ್ದಾರೆ."

ಈ ಕತೆಯ ವಿವರಗಳನ್ನು ಕೇಳಿ ವಿಷಣ್ಣನಾಗಿ ರೂಮಿನತ್ತ ಹೆಜ್ಜೆ ಹಾಕುವಾಗ ನಣ್ಣರು ಗಹಗಹಿಸಿ ನಗುತ್ತಿದ್ದುದು ಕೇಳಿಸಿ ನನಗೆ ಅಳು ಬಂದುಬಿಟ್ಟಿತು.

## ಬಿ. ಜನಾರ್ದನ ಭಟ್

ಲೇಖಕರು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಬೆಳ್ಮಣ್ಣಿನವರು. ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದು ಬೆಳ್ಮಣ್ಣಿನ ಸರಕಾರಿ ಪ.ಪೂ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದಾರೆ.

10ನೇ ತರಗತಿಯಲ್ಲಿರುವಾಗ (1975) ಇವರ 'ಪೊಲೀಸರು' ಎಂಬ ಸಣ್ಣಕತೆ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಂತರ ಇದುವರೆಗೂ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ನಾಲ್ಕು ಕಾದಂಬರಿ, ಎರಡು ಕಥಾಸಂಕಲನ ಸಹಿತ 56 ಕೃತಿಗಳನ್ನು ಪ್ರಕಟಿಸಿದ್ದಾರೆ.